ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಮಾದಕದ್ರವ್ಯ ಪ್ರಕರಣಗಳ ವಿಶೇಷ ನ್ಯಾಯಾಲಯ, ಕೋಲಾರ

Spl.C.(NDPS) 24/2022

ಫ್ರಾಸಾಃ **2** ಚಾಸಾಃ **1**
**ದಿನಾಂಕಃ 13-02-2025**

ಸಾಕ್ಷಿಗೆ ಕ್ರಮವಾಗಿ ಪ್ರಮಾಣ ವಚನ ಬೋಧಿಸಲಾಯಿತು..

ಹೆಸರು :- ಆಂಜಪ್ಪ ಎಲ್
ತಂದೆಯ ಹೆಸರು :- ಮುನಿಯಪ್ಪ
ವಯಸ್ಸು :- 46 ವರ್ಷಗಳು
ಉದ್ಯೋಗ :- ಪೊಲೀಸ್ ಇನ್ಸ್‌ಪೆಕ್ಟರ್, ಬೆಸ್ಕಾಂ ವಿಜಿಲೆನ್ಸ್
ವಾಸ ಸ್ಥಳ :- ಕೋಲಾರ

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಾದ ಮಾಧವ ಪದ್ಮನಾಭ ಗಾವಂಕರ್ ರವರಿಂದಃ

ನಾನು ದಿನಾಂಕಃ 19-09-2019 ರಿಂದ 17-01-2022 ರವರೆಗೆ ಕೋಲಾರ ಗ್ರಾಮಾಂತರ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕಃ **21-09-2021** ರಂದು ಬೆಳಗ್ಗೆ **11-00** ಗಂಟೆಗೆ ಠಾಣೆಯಲ್ಲಿದ್ದಾಗ ಒಂದು ಖಚಿತ ಮಾಹಿತಿ ಬಂತು, ಮಾರ್ಜೇನಹಳ್ಳಿಯಲ್ಲಿ ಕೊಂಡರಾಜನಹಳ್ಳಿ ವಾಸಿ ಬಾಬು ಸಿಂಗ್ ಅಕ್ರಮವಾಗಿ ಗಾಂಜಾ ಮಾರಾಟ ಮಾಡಲು ದಾಸ್ತಾನು ಮಾಡಿದ್ದಾನೆ ಎಂದು ತಿಳಿದುಬಂತು. ನಾನು ತಕ್ಷಣ ಚಾಸಾ-9 ರವರನ್ನು ಕರೆಯಿಸಿಕೊಂಡೆ. ಚಾಸಾ-2 ರಿಂದ 4 ರವರನ್ನು ನೋಟೀಸು ನೀಡಿ ಪಂಚರಾಗಿ ಬರಲು ಬರಮಾಡಿಕೊಂಡೆ. ಸದರಿ ನೋಟೀಸನ್ನ ಈಗಾಲಗೇ ನಿಪಿ-3 ಎಂದು ಗುರುತಿಸಲಾಗಿದೆ. ನಿಪಿ-3(ಬಿ) ನನ್ನ ಸಹಿ. ನಾನು, ಪಂಚರು, ಠಾಣಾ ಸಿಬ್ಬಂದಿ ಇಲಾಖಾ ವಾಹನದಲ್ಲಿ ಗುನ್ನೆ ಜಾಗೆ ಬಳಿ ಹೋದೆವು, ಸ್ವಲ್ಪ ದೂರದಲ್ಲಿ ವಾಹನ ನಿಲ್ಲಿಸಿ ನೋಡಲಾಗಿ, ಬಾಬುಸಿಂಗ್ ಮನೆಯ ಮುಂಭಾಗ ಒಬ್ಬ ಆಸಾಮಿ ನಿಂತಿದ್ದು, ಪೊಲೀಸರನ್ನು ನೋಡಿ ಓಡಿ ಹೋದನು. ಸಿಬ್ಬಂದಿ ಆತನನ್ನು ಹಿಡಿದು ವಿಚಾರಿಸಲಾಗಿ, ತನ್ನ ಹೆಸರು ಬಾಬು ಸಿಂಗ್ ಎಂದು ವಿಳಾಸ ತಿಳಿಸಿದ. ಆರೋಪಿಯ ಮನೆ ಸುತ್ತ ಮುತ್ತಲು ಹುಡುಕಲಾಗಿ, ಮನೆಯ ಮುಂಭಾಗ ರಾಗಿ ತೋಟ ಇದೆ.

ರಾಗಿ ಬೆಳೆ ಮಧ್ಯ ಗಾಂಜಾ ಮೂಟೆ ಸಿಕ್ಕಿತು. ಜೊತೆಗೆ ಬಂಗಾರ ಮತ್ತು ನಗದು ಹಣ ಇತ್ತು. ಆರೋಪಿ ಅಲ್ಲೇ ಇದ್ದ. ಆರೋಪಿ ಅದನ್ನು ಮಾರಾಟ ಮಾಡಲು ಶೇಖರಿಸಿಟ್ಟಿದ್ದಾಗಿ ಹೇಳಿದ. ಸದರಿ ಚೀಲವನ್ನು ಬಿಚ್ಚಿ ನೋಡಲಾಗಿ ಇನ್ನೊಂದು ಚೀಲ ಇತ್ತು. ಅದನ್ನು ಬಿಚ್ಚಿ ನೋಡಲಾಗಿ ಹೂ, ಕಾಯಿ, ಎಲೆ ಒಳಗೊಂಡಿರುವ ಗಾಂಜಾ ಕಂಡು ಬಂದಿತು. ಅದೇ ಚೀಲದಲ್ಲಿ ಬಾಕ್ಸ್ ಇದ್ದು, ಅದರಲ್ಲಿ ಬಂಗಾರದಂತೆ ಕಾಣುವ 4 ನೆಕ್ಲೇಸ್, ಬಂಗಾರದಂತೆ ಕಾಣುವ ಡಾಲರ್ ಇರುವ ಕತ್ತಿನ ಸರ, ಬಂಗಾರದಂತೆ ಕಾಣುವ ಮೂರು ಜೊತೆ ಓಲೆ ಹಾಗೂ ಹ್ಯಾಂಗಿಂಗ್ಸ್-ಗಳು, ಬಂಗಾರದಂತೆ ಕಾಣುವ ಒಂದು ಬ್ರಾಸ್‌ಲೇಟ್, ಬಂಗಾರದಂತೆ ಕಾಣುವ ಐದು ಉಂಗುರಗಳು, ಬಂಗಾರದಂತೆ ಕಾಣುವ ಎರಡು ಜೊತೆ ಡ್ರಾಪ್ಸ್ ಓಲೆಗಳು, ಬೆಳ್ಳಿಯಂತೆ ಕಾಣುವ ಒಂದು ಉಂಗುರ ಕಂಡು ಬಂತು. ತೂಕದ ಯಂತ್ರದ ಮೂಲಕ ತೂಕ ಹಾಕಿ ನೋಡಲಾಗಿ ಒಡವೆಗಳ ತೂಕ 141 ಗ್ರಾಮ್ ಇತ್ತು. ನೋಟುಗಳನ್ನು ಎಣಿಸಲಾಗಿ ರೂ.500/- ಮುಖಬೆಲೆಯ 86 ನೋಟುಗಳು ಇದ್ದು, ಒಟ್ಟು 43000/- ಕಂಡು ಬಂತು. ತೂಕ ಮಾಡಲಾಗಿ ಗಾಂಜಾ 1 ಕೆಜಿ 196 ಗ್ರಾಮ್ ಇರುತ್ತದೆ. ಹಣದ ಬಗ್ಗೆ ವಿಚಾರಿಸಲಾಗಿ ಆರೋಪಿ ಗಾಂಜಾ ಮಾರಾಟದಿಂದ ಬಂದ ಹಣ ಎಂದು ಹೇಳಿದರು. ಗಾಂಜಾ ಬಗ್ಗೆ ವಿಚಾರಿಸಲಾಗಿ 15 ದಿನಗಳ ಹಿಂದೆ ಹೊಸಕೋಟೆ ಗೌಸ್ ರವರಿಂದ ಖರೀದಿ ಮಾಡಿದ್ದು, ಮಾರಾಟ ಮಾಡಿ ಉಳಿದ ಗಾಂಜಾ ಎಂದು ಹೇಳಿದ. ಒಡವೆಗಳ ಬಗ್ಗೆ ಸಮಂಜಸ ಉತ್ತರ ಕೊಡಲಿಲ್ಲ. ಗಾಂಜಾ, ಹಣ, ಒಡವೆ ಪ್ರತ್ಯೇಕವಾಗಿ ಚೀಲದಲ್ಲಿ ಕಟ್ಟಿ ದಾರದಿಂದ ಸುತ್ತಿ ಎಂಆರ್ ಎಂಬ ಸೀಲಿನಿಂದ ಸೀಲ್ ಮಾಡಿದೆವು. ಈ ಸಮಯದಲ್ಲಿ ಫೋಟೋಗಳನ್ನು ತೆಗೆಸಿದೆ. 14 ಫೋಟೋಗಳನ್ನು ಒಟ್ಟಾಗಿ ನಿಪಿ-2 ಎಂದು ರ ಗುರುತಿಸಲಾಗಿದೆ. ಈ ಬಗ್ಗೆ ವಿವರವಾದ ಮಹಜರನ್ನು ಬರೆಯುಲಾಗಿದೆ. ಮಹಜರನ್ನು ನಿಪಿ-1 ಎಂದು ಗುರುತಿಸಲಾಗಿದೆ, ನನ್ನ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ವಶಪಡಿಸಿಕೊಂಡ ಮಾಲು, ಆರೋಪಿಯನ್ನು ಕರೆದುಕೊಂಡು ಬಂದು ಠಾಣೆಗೆ ವಾಪಸ್ಸಾದೆ. ಈ ಬಗ್ಗೆ ಠಾಣಾಧಿಕಾರಿಗೆ ಈಗ ತೋರಿಸಿದ ಜ್ಞಾಪನ ನೀಡಿದ್ದೇನೆ, ಅದನ್ನು ನಿಪಿ-4 ಎಂದು, ನನ್ನ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿ ಗುರುತಿಸಿದ್ದೇನೆ. ಹಣ ಮತ್ತು ಒಡವೆಗಳನ್ನು ನೋಡಿದರೆ ಗುರುತಿಸಬಲ್ಲೆ. ಹಣ ಮತ್ತು ಒಡವೆಗಳನ್ನು ಗುರುತಿಸಲು ಯಾವುದೇ ಆಕ್ಷೇಪಣೆ ಇಲ್ಲ ಎಂದು ಆರೋಪಿ ಪರ ವಕೀಲರು ಹೇಳಿದ್ದಾರೆ ಕಾರಣ ಸದರಿ ವಸ್ತುಗಳನ್ನು ಈ ನ್ಯಾಯಾಲಯದ ಆದೇಶದಂತೆ ಆರೋಪಿಯ ವಶಕ್ಕೆ ಕೊಡಲಾಗಿದೆ. (ದಿನಾಂಕಃ 02-05-2023)

**ಫ್ರಾಸಾಃ 2 ಚಾಸಾಃ 1**

<u>ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಎಂಎ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

ಓ ಹೇ ಕೇ ಸ ಇ

**(ಮಂಜುನಾಥ ಜಿ.ಎ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕೋಲಾರ.**